O.S .No. 247/2014

ಡಿ.ಡಬ್ಲ್ಯೂ-1

ದಿನಾಂಕ: 25.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ವಾದಿ ಪರ ಶ್ರೀ ಹೆಚ್.ಪಿ.ಎಲ್. ವಕೀಲರಿಂದಃ</u>

ನಾನು ಕಂಪಲಾಪುರ ವಾಸಿ. ನನ್ನ ತಂದೆಯ ಊರು ಕಂಪಲಾಪುರ. ನನ್ನ ತಂದೆಗೆ ಇಬ್ಬರು ಅಣ್ಣ-ತಮ್ಮಂದಿರು ಹಾಗೂ 4 ಜನ ಅಕ್ಕ-ತಂಗಿಯರು. ಸದರಿಯವರಿಗಿಂತ ನಿಮ್ಮ ತಂದೆಯೇ ದೊಡ್ಡವರು ಎಂದರೆ ಸರಿ. ದಾವೆಯನ್ನು ವಾದಿ ದಾವಾ ಆಸ್ತಿ ನನಗೆ ಸೇರುವುದಿಲ್ಲ ಎಂದು ಹೂಡಿರುತ್ತಾರೆ. ದಾವಾ ಆಸ್ತಿ ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ನಿಮ್ಮ ತಂದೆಯ ಅಕ್ಕ-ತಂಗಿಯರ ಮತ್ತು ಅಣ್ಣ-ತಮ್ಮಂದಿರ ಹೆಸರು ಏನು ಎಂದರೆ ಸಾಕ್ಷಿ ನನ್ನ ತಂದೆ ಅಣ್ಣಯ್ಯ, ಅವ್ವಯ್ಯಮ್ಮ, ಸಣ್ಣಮ್ಮ, ಪಾರ್ವತಿ, ಜಯಮ್ಮ, ರಮೇಶ ಎಂದು ಹೇಳುತ್ತಾರೆ.

ನಮ್ಮ ತಂದೆಗೆ ಇಬ್ಬರು ಹೆಂಡತಿಯರಿದ್ದು, ನನ್ನ ತಾಯಿ ಮೃತಪಟ್ಟ ನಂತರ ನನ್ನ ಚಿಕ್ಕಮ್ಮನಾದ ರಾಮಮ್ಮಳನ್ನು ಮದುವೆಯಾಗಿರುತ್ತಾರೆ. ನಿಮ್ಮ ತಾಯಿಗೆ ನೀವು ಒಬ್ಬಳೇ ಮಗಳು ಎಂದರೆ ಸಾಕ್ಷಿ ನನ್ನ ತಾಯಿ ಮತ್ತು ನನ್ನ ಚಿಕ್ಕಮ್ಮ ಇಬ್ಬರಿಗೂ ಸೇರಿ ನಾನೊಬ್ಬಳೇ ಮಗಳು ಎಂದು ಹೇಳುತ್ತಾರೆ. ನೀವು ಮದುವೆಯಾದ ನಂತರ ನಿಮ್ಮ ಗಂಡನೊಂದಿಗೆ ವಾಸ ಇದ್ದೀರಿ ಎಂದರೆ ಸರಿ. ನಿಮ್ಮ ತಂದೆ ಹಾಗೂ ನಿಮ್ಮ ಚಿಕ್ಕಮ್ಮ ಅವರು ಬದುಕಿರುವವರೆಗೂ ವಾದಿಯ ತಂದೆ ರಮೇಶ ರವರೊಂದಿಗೆ ವಾಸ ಇದ್ದರು ಎಂದರೆ ಸಾಕ್ಷಿ ಇಲ್ಲ, ನಮ್ಮೊಂದಿಗೆ ವಾಸ ಇದ್ದರು ಎಂದು ಹೇಳುತ್ತಾರೆ. ನಿಮ್ಮ ತಂದೆ ಹಾಗೂ ನಿಮ್ಮ ಚಿಕ್ಕಮ್ಮ ನಿಮ್ಮೊಂದಿಗೆ ವಾಸ ಇದ್ದ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನನ್ನ ತಂದೆಯ ಮನೆಯಲ್ಲೇ ಇದ್ದು, ನಾನು ಅವರ ಕಷ್ಟ ಸುಖ ನೋಡುತ್ತಿದ್ದೆ ಎಂದು ಹೇಳುತ್ತಾರೆ. ನಿಮ್ಮ ತಂದೆ ಮೃತಪಟ್ಟಾಗ ಅವರ ಕಾರ್ಯವನ್ನು ವಾದಿಯಿಂದ ಮಾಡಿಸಲಾಯಿತು ಎಂದರೆ ಸಾಕ್ಷಿ ಇಲ್ಲ, ನಾನೇ ಮಾಡಿದೆ ಎಂದು ಹೇಳುತ್ತಾರೆ. ನಿಮ್ಮ ತಂದೆಯ ಕಾರ್ಯವನ್ನು ನಿವೇ ಮಾಡಿದ್ದೀರಿ ಎಂದು ತೋರಿಸಲು ನ್ಯಾಯಾಲಯದ ಮುಂದೆ ಸಾಕ್ಷ್ಯ ಹೇಳಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿ ಯಾರು ಬರುವುದಿಲ್ಲ ಎಂದು ಹೇಳುತ್ತಾರೆ.

ನನಗೆ ಮೂರು ಜನ ಮಕ್ಕಳು. ದಾವಾ ಆಸ್ತಿಯನ್ನು ಈಗ ಯಾರು ಉಳುಮೆ ಮಾಡುತ್ತಿದ್ದಾರೆಂದರೆ ಸಾಕ್ಷಿ ನಾನೇ ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ನೀವು ಉಳುಮೆ ಮಾಡುತ್ತಿದ್ದೀರಿ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಬರೆಸಿದ್ದೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ಎಷ್ಟು ಬೆಲೆಗೆ ಖರೀದಿಸಲಾಯಿತು ಎಂದರೆ ಸಾಕ್ಷಿ ನಾನು ಚಿಕ್ಕವಳಾಗಿದ್ದರಿಂದ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಜಮೀನು ಖರೀದಿ ಮಾಡಿದಾಗ ನೀವು ಇನ್ನು ಹುಟ್ಟಿರಲಿಲ್ಲ ಎಂದರೆ ಸಾಕ್ಷಿ ಹುಟ್ಟಿದ್ದೆ, ನಾವು ಎಲ್ಲ ಜಮೀನಿನಲ್ಲಿ ಕೆಲಸ ಮಾಡಿರುತ್ತೇವೆ ಎಂದು ಹೇಳುತ್ತಾರೆ. ದಾವಾ

ಆಸ್ತಿಯನ್ನು ಖರೀದಿಸಿದಾಗ ನಿಮ್ಮ ತಂದೆ ಹಾಗೂ ಅವರ ತಮ್ಮ ರಮೇಶ ರವರಿಗೆ ಎಷ್ಟು ವಯಸ್ಸಾಗಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

ದಾವಾ ಆಸ್ತಿಯನ್ನು ವಾದಿಯ ತಂದೆ ತನ್ನ ಅಪ್ರಾಪ್ತ ವಯಸ್ಸಿನಲ್ಲಿ ಖರೀದಿ ಮಾಡಿದ್ದು, ಅವರು ಅಪ್ರಾಪ್ತರಾದ್ದರಿಂದ ದಾವಾ ಆಸ್ತಿಯನ್ನು ನಿಮ್ಮ ತಂದೆಯ ಹೆಸರಿನಲ್ಲಿ ಕ್ರಯ ಮಾಡಿಸಲಾಗಿತ್ತು ಎಂದರೆ ಸುಳ್ಳು. ನಿಮ್ಮ ತಂದೆ ಉಷಾರಿಲ್ಲದಾಗ 2008 ರಲ್ಲಿ ಆಸ್ಪತ್ರೆಗೆ ಯಾರು ಕರೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿ ನಾನೇ ಎಂದು ಹೇಳುತ್ತಾರೆ. ಆಸ್ಪತ್ರೆಗೆ ನೀವು ಕರೆದುಕೊಂಡು ಹೋಗಿದ್ದೀರಿ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನಿಮ್ಮ ತಂದೆಗೆ ಉಷಾರಿಲ್ಲದಾಗ ವಾದಿಯ ತಂದೆ ಶುಶ್ರೂಕೆ ಮಾಡಿ, ಆಸ್ಪತ್ರೆಗೆ ಸೇರಿಸಿ ಸುಮಾರು 5-6 ಲಕ್ಷ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದರಿಂದ ನಿಮ್ಮ ತಂದೆ ವಾದಿಯ ತಂದೆಗೆ ದಾವಾ ಆಸ್ತಿಯನ್ನು ನೀವು ಅಪ್ರಾಪ್ತ ವಯಸ್ಸಿನಲ್ಲಿ ಖರೀದಿಸಿದ್ದು, ಅದನ್ನು ವಾದಿಗೆ ಮರಣ ಶಾಸನ ಮಾಡುವುದಾಗಿ, ಅದನ್ನು ವಾದಿ ಮತ್ತು ವಾದಿಯ ತಂದೆ ಖಾತೆ ಮಾಡಿಸಿಕೊಂಡು, ಅನುಭವಿಸಿಕೊಂಡು ಹೋಗುವುದು ಎಂದು ಹೇಳಿ ಮರಣ ಶಾಸನ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ಮಹಾದೇವ ಬಿನ್ ಕೆಂಪಣ್ಣ, ಸ್ವಾಮಿ ಬಿನ್ ವೆಂಕಟಯ್ಯ ಹಾಗೂ ರಾಮಮ್ಮ ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆಂದರೆ ಸುಳ್ಳು. ಸದರಿಯವರನ್ನು ನಿಮ್ಮ ಪರ ಸಾಕ್ಷ್ಯ ಮಾಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿ ತೊಂದರೆ ಇಲ್ಲ ಎಂದು ಹೇಳುತ್ತಾರೆ.

ನೀವು ನಿಮ್ಮ ಮಗಳ ಮದುವೆಗೆ ವಾದಿಯ ತಂದೆಯಿಂದ ಹಣ ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ವಾದಿಯ ತಂದೆಯೇ ನಿಮ್ಮ ಇಬ್ಬರು ಹೆಣ್ಣು ಮಕ್ಕಳ ಮದುವೆ ಮಾಡಿದ್ದು, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.